ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

1) ಈ ಯೋಜನೆಗೆ - 129.36 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ದೊರೆತಿದೆ. ಈ ಯೋಜನೆಯಿಂದ ನೀರಾವರಿಯಾಗುವ ಕ್ಷೇತ್ರವು 480 ಹೆಕ್ಟೇರ್.

2) ಇಲ್ಲಿಯವರೆಗೆ- 58.18 ಲಕ್ಷ ರೂ.ಗಳನ್ನು ಖರ್ಚುಮಾಡಲಾಗಿದೆ.

3) ಗುತ್ತಿಗೆದಾರರ ನಿರ್ಲಕ್ಷ್ಯತನದಿಂದ ಈ ಕಾಮಗಾರಿಯು ಸ್ಥಗಿತಗೊಂಡಿದ್ದು, ಸದರೀ ಗುತ್ತಿಗೆಯನ್ನು ರದ್ದುಪಡಿಸಿ ಹೊಸ ಗುತ್ತಿಗೆದಾರರನ್ನು ನೇಮಿಸುವುದರಿಂದ ಸರ್ಕಾರಕ್ಕೆ (126.89-65.85) 61.04 ಲಕ್ಷ ರೂ.ಗಳಷ್ಟು ನಷ್ಟ ಅನುಭವಿಸಬೇಕಾಗಿದೆ.

4) -ಹೌದು-

5.6.7) ಉಳಿಕೆ ಕಾಮಗಾರಿಯನ್ನು ದಿನಾಂಕ: 3-2-2001ರಂದು ಮರು ಪ್ರಾರಂಭಿಸಲಾಗಿದೆ. ಈ ಕಾಮಗಾರಿಯನ್ನು ಮುಗಿಸಲು ನಿಗದಿಪಡಿಸಿದ ಅವಧಿಯು 18 ತಿಂಗಳು (ಮಳೆಗಾಲ ಹೊರತುಪಡಿಸಿ) ಆಗಿದ್ದು ದಿನಾಂಕ: 2-2-2003ರಲ್ಲಿ ಮುಗಿಸಲು ಯೋಜಿಸಿದೆ.

ವಿದ್ಯುತ್ ಸ್ಟೇಷನ್ ಪ್ರಾರಂಭಿಸಲು ನಿವೇಶನ ಕೊಟ್ಟ ಹೊಲದ ಮಾಲೀಕರಿಗೆ ಹಣ ಕೊಡುವುದು:

61 (263) ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಸಿಂಧೋಗಿ-ಮುನವಳ್ಳಿ ಗ್ರಾಮದಲ್ಲಿ 33 ಕೆ.ವಿ.ಸ್ಟೇಷನ್ ಕಟ್ಟಲು ಜಮೀನು ನೀಡಿದ ಭೂ ಮಾಲೀಕರಿಗೆ ಭೂಮಿಯ ಬೆಲೆಯನ್ನು ಕೊಡದೆ ಇದ್ದ ಸಂಗತಿ ನಿಜವೇ;

2) ಹಾಗಿದ್ದಲ್ಲಿ, ಕೂಡಲೇ ಭೂಮಿಯ ಬೆಲೆಯನ್ನು ಭೂ ಮಾಲೀಕರಿಗೆ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

3) 33 ಕೆ.ವಿ. ಸ್ಟೇಷನ್ ಕಟ್ಟಲು ಎಷ್ಟು ಎಕರೆ ಜಮೀನನ್ನು ತೆಗೆದುಕೊಳ್ಳಲಾಗಿದೆ. ಅದರ ಸರ್ವೆ ನಂಬರು ಮತ್ತು ಆ ಭೂಮಿಯ ಮಾಲೀಕರು ಯಾರು ವಿವರ ನೀಡುವುದು;

4) ಜಮೀನನ್ನು ಎಂದು ವಶಕ್ಕೆ ತೆಗೆದುಕೊಳ್ಳಲಾಯಿತು ಹಾಗೂ 33 ಕೆ.ವಿ. ಸ್ಟೇಷನ್ ಕಟ್ಟಲು ಎಷ್ಟು ಕ್ಷೇತ್ರವನ್ನು ವಶಕ್ಕೆ ತೆಗೆದುಕೊಳ್ಳಲಾಯಿತು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಹೌದು ನಿಜ.

2) ಜಿಲ್ಲಾಧಿಕಾರಿ, ಬೆಳಗಾವಿಯವರು ಸದರಿ ಜಮೀನಿಗೆ ಪ್ರತಿ ಎಕರೆಗೆ ರೂ. 50,000-00 ರಂತೆ ಬೆಲೆ ಕಟ್ಟಿದ್ದು ಅದಕ್ಕೆ ಭೂ ಮಾಲೀಕರು ಒಪ್ಪಿಕೊಂಡಿದ್ದರು. ಅದರಂತೆ ನಿಗಮವು (ಅಂದಿನ ಕ.ವಿ. ಮಂಡಳಿ) ದಿನಾಂಕ: 23-7-1997ರಂದು ಒಟ್ಟು ಮೂರು ಎಕರೆ ಜಮೀನಿಗೆ

ರೂ. 1,50,000-00 ಭೂ ಮಾಲೀಕರಿಗೆ ಪಾವತಿ ಮಾಡಲು ಅನುಮೋದಿಸಿದ್ದು, ಅದರಂತೆ ಭೂ ಮಾಲೀಕರಿಗೆ ಹಣವನ್ನು ಡಿ.ಡಿ. ಮೂಲಕ ಪಾವತಿಸಲು ಕ್ರಮ ಕೈಗೊಳ್ಳಲಾಯಿತು. ಆದರೆ ಭೂ ಮಾಲೀಕರು ಸದರಿ ಹಣವನ್ನು ಪಡೆಯಲು ತಿರಸ್ಕರಿಸಿದರು ಮತ್ತು ಭೂ ಮಾಲೀಕರು ಸದರಿ ಜಮೀನನ್ನು ದಿನಾಂಕ: 11-9-1996 ರಂದು ಜಿಲ್ಲಾಧಿಕಾರಿಯವರಿಂದ ಕೃಷಿಯೇತರ ಜಮೀನನ್ನಾಗಿ ಪರಿವರ್ತಿಸಿ, ಪ್ರತಿ ಎಕರೆಗೆ ರೂ. 10 ಲಕ್ಷದಂತೆ ಭಾರ ಮಾಡಲು ಕೋರಿರುತ್ತಾರೆ. ನಿಗಮವು ಈ ಹಿಂದೆ ಭೂ ಮಾಲೀಕರು ಒಪ್ಪಿಕೊಂಡಿರುವಂತೆ ಕನ್ಸಂಟ್ ಅವಾರ್ಡ್ ಮೂಲಕ ಭೂಮಿಯನ್ನು ಪಡೆದುಕೊಳ್ಳುವ ಬಗ್ಗೆ ಪ್ರಯತ್ನ ನಡೆಸುತ್ತಿದ್ದು, ಹಾಗೂ ಯಾವುದೇ ರೀತಿಯ ಅಹಿತಕರ ಘಟನೆ ಆಗದಂತೆ ನ್ಯಾಯಾಲಯದಿಂದ ತಾತ್ಕಾಲಿಕ, ನಿರ್ಬಂಧಾಜ್ಞೆ (ಟೆಂಪರರಿ ಇಂಜಕ್ಷನ್)ಯನ್ನು ಸಹಾ ಪಡೆದಿರುತ್ತದೆ. ಈಗಲೂ ಸಹಾ ಭೂ ಮಾಲೀಕರು ನಿಗದಿಪಡಿಸಿರುವ ದರವಾದ ಎಕರೆಗೆ ರೂ. 50,000-00 ರಂತೆ ಹಣವನ್ನು ಪಡೆಯಲು ಒಪ್ಪಿದಲ್ಲಿ ತುರ್ತಾಗಿ ಹಣವನ್ನು ಪಾವತಿಸಲಾಗುವುದು.

3) ಈ ಸ್ಟೇಷನ್ ನಿರ್ಮಾಣಕ್ಕೆ ಮೂರು ಎಕರೆ ಜಮೀನನ್ನು ಪಡೆಯಲಾಗಿದೆ. ಆ ಜಮೀನಿನ ಸರ್ವೆನಂಬರ್ ರೀ.ಸ. ನಂ. 507 ಇದ್ದು ಅದರ ಮಾಲೀಕರು ಶ್ರೀ ಮ.ನಿ.ಪ್ರ.ಸ.ಕುಮಾರ ಸ್ವಾಮಿಗಳು, ಆಲೂರು ವೀರಕ್ತ ಮಠ, ಮುನವಳ್ಳಿ ರವರಾಗಿರುತ್ತಾರೆ.

4) ಸದರಿ ಸ್ಟೇಷನ್ ಕಟ್ಟಲು ಬೇಕಾಗಿರುವ ಜಮೀನನ್ನು ದಿನಾಂಕ: 7-12-1994 ರಂದು ವಶಕ್ಕೆ ತೆಗೆದುಕೊಳ್ಳಲಾಗಿದ್ದು, ಅದರ ವಿಸ್ತೀರ್ಣ 3 ಎಕರೆ.

ಬೆಂಗಳೂರಿನ ರೇಸ್ ಕೋರ್ಸ್‌ನ್ನು ಸ್ಥಳಾಂತರಿಸುವ ಕುರಿತು:

63 (265) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೆಂಗಳೂರಿನಲ್ಲಿರುವ ರೇಸ್‌ಕೋರ್ಸ್‌ನ್ನು ಸ್ಥಳಾಂತರಿಸಿ ಅದನ್ನು ಬೆಂಗಳೂರಿನ ಹೊರವಲಯದಲ್ಲಿ ನಿರ್ಮಿಸಲಾಗುವುದೆಂಬ ಸಂಗತಿ ನಿಜವೆ;

2) ಹಾಗಿದ್ದಲ್ಲಿ, ಇದರ ನಿರ್ಮಾಣಕ್ಕಾಗಿ ಎಷ್ಟು ಎಕರೆ ಜಮೀನನ್ನು ನಿಗದಿಪಡಿಸಲಾಗಿದೆ;

3) ರೇಸ್‌ಕೋರ್ಸ್‌ನ್ನು ಹೊರವಲಯದಲ್ಲಿ ಸ್ಥಳಾಂತರ ಮಾಡಿದ ನಂತರ ಈಗಿರುವ ಸ್ಥಳದಲ್ಲಿ ಬೇರೆಯವರು ಕಟ್ಟಡಗಳನ್ನು ಕಟ್ಟದಂತೆ ಕ್ರಮ ಕೈಗೊಳ್ಳಲಾಗುವುದೇ;

4) ಸದರಿ ಜಾಗವನ್ನು ಸಾರ್ವಜನಿಕರ ಅನುಕೂಲಕ್ಕೆ ಗಾರ್ಡ್‌ನ್ (ಹೂದೋಟ) ಮಾಡಲು ಸರ್ಕಾರ ಯೋಗ್ಯ ಕ್ರಮ ಕೈಗೊಳ್ಳುವುದೇ;

5) ರೇಸ್‌ಕೋರ್ಸ್‌ನ್ನು ಹೊರವಲಯಕ್ಕೆ ಸ್ಥಳಾಂತರಿಸಿದ ನಂತರ ಸದರಿ ಜಾಗವನ್ನು ಯಾವ ಉದ್ದೇಶಕ್ಕಾಗಿ ಮೀಸಲಿಡಲಾಗುವುದು?